# ಪ್ರಾಣಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತವೆಯೇ?

(39ನೇ ಪುಟದಿಂದ)

2005ರ ಜನವರಿಯಲ್ಲಿ ಕ್ಯಾಲಿಫೋರ್ನಿಯಾದ ಸಮುದ್ರ ತೀರದಲ್ಲಿ ಸಾವಿರಾರು ಸತ್ತ ಜಂಬೊ ಸ್ಕ್ವಿಡ್‌ಗಳು ತೇಲಿ ಬಂದಿದ್ದವು. ಇವುಗಳು ಸಮುದ್ರದಲ್ಲಿ 2,300 ಆಳದಲ್ಲಿ ಜೀವಿಸುತ್ತವೆ. ಹೀಗಾಗಿಯೇ ಈ ಪ್ರಭೇದದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಸಾವಿರಾರು ಸಂಖ್ಯೆಯಲ್ಲಿ ಇವುಗಳು ಸಾವನ್ನಪ್ಪಿರುವ ಬಗ್ಗೆ ವಿಜ್ಞಾನಿಗಳಲ್ಲಿ ಚಿಂತೆ ಮೂಡಿದೆ. ಇವುಗಳು ವಿಷಕಾರಿ ಅಂಶದಿಂದಾಗಿ ಸಾವನ್ನಪ್ಪಿರಬಹುದು ಎಂಬ ಸಂಶಯವಿದೆ. ಆದರೆ ಇವುಗಳು ವಿಷದಿಂದ ಸತ್ತಿದ್ದರೆ, ಇವುಗಳೊಂದಿಗೆ ಸಮುದ್ರದ ಬೇರೇ ಜೀವಿಗಳೂ ಸತ್ತಿರಬೇಕಿತ್ತು. ಹಾಗೆ ಆಗಿರಲಿಲ್ಲ. ಜೊತೆಗೆ ಅವುಗಳು ಸೇವಿಸಿರುವ ಆಹಾರದಿಂದ ಸಾವು ಸಂಭವಿಸಿದ್ದಲ್ಲಿ, ಸಾವಿರಾರು ಸಂಖ್ಯೆಯಲ್ಲಿ ಮೀನುಗಳು ಒಂದೇ ರೀತಿಯ ಆಹಾರ ಸೇವಿಸಿರಲು ಸಾಧ್ಯವೇ ಇಲ್ಲ ಎನ್ನುತ್ತಾರೆ ವಿಜ್ಞಾನಿಗಳು. 2002ರಲ್ಲಿ ಸ್ಯಾನ್ ಡಿಯಾಗೊದಲ್ಲೂ ಇದೇ ರೀತಿಯ ಘಟನೆ ನಡೆದಿತ್ತು.

ಮನುಷ್ಯ ಹಾಗೂ ಪ್ರಾಣಿಗಳಿಗೆ ಅರಿವಿನ ಸಾಮರ್ಥ್ಯದ ವ್ಯತ್ಯಾಸವಿರುತ್ತದೆ. ಮನುಷ್ಯನಿಗೆ ಭವಿಷ್ಯದ ಬಗ್ಗೆ ಯೋಚಿಸುವ ಶಕ್ತಿ ಇರುತ್ತದೆ. ತಾನು ಸಾಯುವುದರಿಂದ ಮುಂದೇನಾಗಬಹುದು ಎಂದು ಕಲ್ಪಿಸಿಕೊಳ್ಳಬಲ್ಲ. ಹಲವಾರು ವಿಷಯಗಳಿಗೆ ಸಂಬಂಧ ಕಲ್ಪಿಸಿ ಯೋಚಿಸುವ ಶಕ್ತಿ ಇರುತ್ತದೆ. ಹೀಗಾಗಿ ಮನುಷ್ಯ ತಾನು ಆತ್ಮಹತ್ಯೆ ಮಾಡಿಕೊಳ್ಳಲು ಯೋಜನೆ ರೂಪಿಸುತ್ತಾನೆ. ಇದೆಲ್ಲ ಪ್ರಾಣಿಗಳಿಗೆ ಸಾಧ್ಯವಿಲ್ಲ ಎನ್ನುತ್ತಾರೆ ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯದ ಮನಶಾಸ್ತ್ರಜ್ಞನ ಥಾಮಸ್ ಸಡನ್ ಡಾರ್ಫ್.

### ಕುರಿ- ನಾಯಿಗಳ ಸಾವು

2005ರಲ್ಲಿ ಟರ್ಕಿಯಲ್ಲಿ ಬೆಟ್ಟವೊಂದರಿಂದ 1500 ಕುರಿಗಳು ಜಿಗಿದಿದ್ದವು. ಇದರಲ್ಲಿ 400 ಮಾತ್ರ ಸಾವನ್ನಪ್ಪಿದ್ದವು. ಸತ್ತ 400 ಕುರಿಗಳ ಮೇಲೆ ಬಿದ್ದಿದ್ದ ಕಾರಣ ಉಳಿದ ಕುರಿಗಳು ಬದುಕುಳಿದಿದ್ದವು. ಬೆಟ್ಟದ ಮೇಲೆ ಮೇಯುತ್ತಿದ್ದ ಮೊದಲು ಒಂದು ಕುರಿ 50 ಅಡಿ ಆಳದ ಗುಂಡಿಗೆ ಹಾರಿತ್ತು. ಅದನ್ನೇ ಹಿಂಬಾಲಿಸಿದ್ದ ಎಲ್ಲ ಕುರಿಗಳು ಒಂದರ ಹಿಂದೆ ಒಂದರಂತೆ ಗುಂಡಿಗೆ ಹಾರಿದ್ದವು. ಈ ಘಟನೆಯಿಂದಾಗಿ ಹಲವು ಜನ ಕುರಿಗಾಹಿಗಳು ಕೆಲಸ ಕಳೆದುಕೊಂಡಿದ್ದರು.

ಇದೇ ರೀತಿ ಸ್ವಿಝರ್ಲಂಡಿನ ಲಾಟರ್ ಬ್ರುನೆನ್‌ನಲ್ಲಿ ಹಸು ಮತ್ತು ಎತ್ತುಗಳು ಇನ್ನೂ ಎತ್ತರದ ಪ್ರದೇಶಕ್ಕೆ ಹೋಗಿ ಜಿಗಿದು ಸಾವನ್ನಪ್ಪಿದ್ದವು. ಅದೂ ಸತತವಾಗಿ ಮೂರು ದಿನಗಳ ಕಾಲ, ಸುಮಾರು 28 ಹಸು ಮತ್ತು ಎತ್ತುಗಳು ಅದೇ ಪ್ರದೇಶಕ್ಕೆ ಹೋಗಿ ಜಿಗಿದು ಸಾವನ್ನಪ್ಪಿದ್ದವು.

ಸ್ಕಾಟ್‌ಲೆಂಡ್‌ನ ಮಿಲ್ಟನ್‌ನಲ್ಲಿರುವ 'ಓವರ್‌ಟೌನ್ ಬ್ರಿಡ್ಜ್', ನಾಯಿಗಳು ಆತ್ಮಹತ್ಯೆ ಮಾಡಿಕೊಳ್ಳುವ ಸೇತುವೆ ಎಂದೇ ಕುಖ್ಯಾತಿ ಗಳಿಸಿದೆ. 1950ರ ಆರಂಭದದಲ್ಲಿ 50 ನಾಯಿಗಳು ಈ ಸೇತುವೆಯಿಂದ ಹಾರಿ ಸತ್ತಿದ್ದವು. 2005ರಲ್ಲಿ ಕೇವಲ 6 ತಿಂಗಳಿನಲ್ಲೇ 5 ನಾಯಿಗಳು ಜೀವ ಕಳೆದುಕೊಂಡಿವೆ. ಸೆಲ್ಟಿಕ್ ಪುರಾಣಗಳ ಪ್ರಕಾರ ಆ ಸೇತುವೆ ಇರುವ ಸ್ಥಳದಲ್ಲಿ ಭೂಮಿ ಮತ್ತು ಸ್ವರ್ಗ ಸೇರುತ್ತದೆ ಎಂಬ ನಂಬಿಕೆ ಇದೆ. ಇದರಿಂದಲೇ ಇಂಥ ಘಟನೆಗಳು ನಡೆಯುತ್ತವೆ ಎನ್ನಲಾಗುತ್ತದೆ.

ಆದರೆ ಕೆಲವು ವಿಜ್ಞಾನಿಗಳ ಪ್ರಕಾರ ಈ ಪ್ರದೇಶದಲ್ಲಿ ತೆಲುದೇಹದ ಮುಂಗುಸಿಯಂತಹ ಪ್ರಾಣಿ (mink) ಸಹಜವಾಗಿ ವಾಸಿಸುತ್ತದೆ. ಅದರ ವಾಸನೆ ಹಿಡಿದು ಹಿಂಬಾಲಿಸುವ ಭರದಲ್ಲಿ ಕೆಳಗೆ ಬಿದ್ದು ಸಾಯುತ್ತವೆ ಎನ್ನುತ್ತಾರೆ. ಆದರೆ ಕೆಲವರು, ನಾಯಿಗಳು ಅಷ್ಟೊಂದು ಮೂರ್ಖತನದಲ್ಲಿ ನಡೆದುಕೊಳ್ಳುವುದಿಲ್ಲ. ನಾಯಿಗಳು ಹಾಗೆ ನಡೆದುಕೊಂಡಿದ್ದೇ ಆದಲ್ಲಿ, ಜಗತ್ತಿನ ಎಲ್ಲ ಕಡೆ ಇಂತಹ ಘಟನೆಗಳು ನಡೆಯಬೇಕಿತ್ತು ಎನ್ನುತ್ತಾರೆ.

ಪ್ರಾಣಿ–ಪಕ್ಷಿಗಳ ಸಾಮೂಹಿಕ ಸಾವಿಗೆ ಅವುಗಳ ಅನಾರೋಗ್ಯ, ಮಾಲಿನ್ಯ, ಜಾಗತಿಕ ತಾಪಮಾನದಲ್ಲಿ ಬದಲಾವಣೆ ಹಾಗೂ ಪರಿಸರದಲ್ಲಿ ಆಗುವ ಭಾರಿ ಬದಲಾವಣೆ (apocalypse) ಸಹ ಕಾರಣವಾಗಬಹುದು.

ವಿಜ್ಞಾನ ಎಷ್ಟೇ ಮುಂದುವರಿದರೂ ಪ್ರಾಣಿ–ಪಕ್ಷಿಗಳ ಮನಸ್ಸನ್ನು ಓದಲು ಇಂದಿಗೂ ಯಾರಿಗೂ ಸಾಧ್ಯವಾಗಿಲ್ಲ. ಹೀಗಾಗಿಯೇ ಅವುಗಳ ನಿಗೂಢ ಸಾವಿನ ಸತ್ಯ ಇನ್ನೂ ಬಹಿರಂಗವಾಗಿಲ್ಲ.




## ಜಟಿಂಗದ ನಿಗೂಢ ರಹಸ್ಯ!

ಅಸ್ಸಾಂನ ದಿಮಾ ಹಸಾವೊ ಜಿಲ್ಲೆಯಲ್ಲಿರುವ ಪುಟ್ಟ ಹಳ್ಳಿ ಜಟಿಂಗ. ಹಸಿರಿನಿಂದ ಕೂಡಿರುವ ಶಾಂತ ವಾತಾವರಣದ ಈ ಪ್ರದೇಶ ಪಕ್ಷಿಗಳ ನಿಗೂಢ ಸಾವಿಗೆ ಕುಖ್ಯಾತಿ ಪಡೆದಿದೆ. ಇದನ್ನು 'ವ್ಯಾಲಿ ಆಫ್ ಡೆತ್ ಫಾರ್ ಬರ್ಡ್ಸ್' ಎಂದು ಕರೆಯಲಾಗುತ್ತದೆ. ಇಲ್ಲಿ ಪ್ರತಿ ವರ್ಷ ಬೇರೆ ಬೇರೆ ಪ್ರದೇಶಗಳಿಂದ ಬರುವ ಕೆಲ ವಲಸೆ ಹಕ್ಕಿಗಳು ಹಾಗೂ ಸ್ಥಳೀಯ ಪಕ್ಷಿಗಳು ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುತ್ತವೆ.

ಪಕ್ಷಿಗಳ ಸಾಮೂಹಿಕ ನಿಗೂಢ ಸಾವಿಗೆ ಕಾರಣ ಹುಡುಕುವ ಸಲುವಾಗಿ ನಡೆಸಿರುವ ಅಧ್ಯಯನಗಳ ಪ್ರಕಾರ ಇದನ್ನು ಸಾಮೂಹಿಕ ಆತ್ಮಹತ್ಯೆ ಎನ್ನಲಾಗುತ್ತಿದೆ. ಆದರೆ ಕೆಲ ಪಕ್ಷಿ ತಜ್ಞರು ಇದನ್ನು ಒಪ್ಪಲು ಸಿದ್ಧರಿಲ್ಲ. ಇನ್ನೂ ಕೆಲವರು ಈ ಕುರಿತು ಸಂಶೋಧನೆ ನಡೆಸುತ್ತಲೇ ಇದ್ದಾರೆ.

ಪ್ರತಿ ವರ್ಷ ನವೆಂಬರ್ ಮತ್ತು ಸೆಪ್ಟೆಂಬರ್‌ನಲ್ಲಿ ಮಳೆಗಾಲದ ಕೊನೆಯಲ್ಲಿ ಇಲ್ಲಿಗೆ ವಲಸೆ ಬರುವ ಕೆಲ ಪ್ರಭೇದದ ಹಕ್ಕಿಗಳು ಮತ್ತು ಸ್ಥಳೀಯ ಪಕ್ಷಿಗಳು ಸೂರ್ಯಾಸ್ತದ ನಂತರ ಸಂಜೆ (7ರಿಂದ 10 ಗಂಟೆ ನಡುವೆ) ಸಾಯುತ್ತವೆ. ಅದೂ ಆಕಾಶದಿಂದ ಜೋರಾಗಿ ಹಾರುತ್ತಾ ಬರುವ ಪಕ್ಷಿಗಳು ನೆಲಕ್ಕೆ, ಗೋಡೆ ಹಾಗೂ ಮರಗಳಿಗೆ ಡಿಕ್ಕಿ ಹೊಡೆದು ಸಾಯುತ್ತವೆ. ಸ್ಥಳೀಯರ ಪ್ರಕಾರ ಆಕಾಶದಲ್ಲಿರುವ ಕೆಟ್ಟ ಆತ್ಮಗಳು ಈ ಘಟನೆಗೆ ಕಾರಣ!

ಅಧ್ಯಯನಗಳ ಪ್ರಕಾರ, ಮಳೆಗಾಲದ ಮಂಜಿನಿಂದಾಗಿ ಹಾರುವಾಗ ಮಾರ್ಗ ತಪ್ಪಿ ಭೂಮಿ ಮೇಲೆ ಕಾಣುವ ಬೆಳಕಿನತ್ತ ಇವು ಆಕರ್ಷಿತವಾಗುತ್ತವೆ. ವೇಗವಾಗಿ ಹಾರುತ್ತಾ ಬೆಳಕಿನತ್ತ ಬರುವಾಗ ಡಿಕ್ಕಿ ಹೊಡೆಯುತ್ತವೆ. ಈ ವಿಷಯ ಅರಿತ ಸ್ಥಳೀಯರು ಮಳೆಗಾಲದಲ್ಲಿ ಉದ್ದೇಶಪೂರ್ವಕವಾಗಿ ಲೈಟ್‌ಗಳನ್ನು ಹಾಕಿ ಸುಲಭವಾಗಿ ಹಕ್ಕಿಗಳನ್ನು ಹಿಡಿದು ತಿನ್ನುತ್ತಾರೆ.

ಆದರಲ್ಲೂ ಉತ್ತರದ ಕಡೆಯಿಂದ ಬರುವ ಪಕ್ಷಿಗಳು ಜಟಿಂಗದ ಉತ್ತರ ಭಾಗದಲ್ಲಿ ಪ್ರತ್ಯೇಕವಾಗಿ 1.5 ಕಿ.ಮೀ ಉದ್ದ ಮತ್ತು 200 ಮೀ ಅಗಲ ಇರುವ ಸ್ಥಳದಲ್ಲಿ ಸಾವೀಗೀಡಾಗುತ್ತವೆ. ದಕ್ಷಿಣ ಭಾಗದಲ್ಲಿ ಬೆಳಕಿಟ್ಟು ಪಕ್ಷಿಗಳನ್ನು ಆಕರ್ಷಿಸಲು ಪ್ರಯತ್ನಿಸಿದರೂ ಯಾವ ಹಕ್ಕಿಯೂ ಬರಲಿಲ್ಲ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ.

ಇಲ್ಲಿ ಕಿಂಗ್ ಫಿಶರ್, ಬ್ಲ್ಯಾಕ್ ಬಿಟರ್ನ್ಸ್, ಟೈಗರ್ ಬಿಟರ್ನ್ಸ್, ಪಾಂಡ್ ಹೆರಾನ್ಸ್ ಸೇರಿದಂತೆ 40 ಪ್ರಭೇದದ ಪಕ್ಷಿಗಳನ್ನು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಭೇದಗಳೆಂದು ಗುರುತಿಸಲಾಗಿದೆ. ಇಲ್ಲಿಗೆ ವಲಸೆ ಬರುವ ಹಕ್ಕಿಗಳು ಮಾನ್ಸೂನ್ ಸಮಯದಲ್ಲಿ ಪ್ರವಾಹದಿಂದ ತಮ್ಮ ನೈಸರ್ಗಿಕ ವಾಸಸ್ಥಾನವನ್ನು ಕಳೆದುಕೊಂಡಿರುತ್ತವೆ. ನಂತರ ಹೊಸ ನೆಲೆ ಅರಸುತ್ತಾ ಬರುವ ದಾರಿಯಲ್ಲಿ ಜಟಿಂಗದಲ್ಲಿ ಸಾವನ್ನಪ್ಪುತ್ತವೆ. ಆದರೆ ಅಸ್ಸಾಂನ ಪಕ್ಷಿ ತಜ್ಞ ಅನ್ವರುದ್ದೀನ್ ಚೌಧರಿ ಅವರು ಇದನ್ನು ಆತ್ಮಹತ್ಯೆ ಅಲ್ಲ ಎಂದು ವಾದಿಸುತ್ತಾರೆ.

ಖ್ಯಾತ ಪಕ್ಷಿತಜ್ಞ ಸಲೀಂ ಅಲಿ ಈ ಘಟನೆ ಕುರಿತಂತೆ ತಮ್ಮ ಅಭಿಪ್ರಾಯವನ್ನು ಹೀಗೆ ದಾಖಲಿಸಿದ್ದಾರೆ –'ಈ ಘಟನೆಯಲ್ಲಿ ಆಶ್ಚರ್ಯದ ಸಂಗತಿ ಎಂದರೆ, ಬೇರೆ ಬೇರೆ ಜಾತಿಯ ಹಾಗೂ ವಿವಿಧ ಪ್ರದೇಶದಿಂದ ಬರುವ ಹಕ್ಕಿಗಳು ಒಂದೆಡೆ ಬಂದು ಸಾಯುವುದು'.

ಪಕ್ಷಿಗಳು ಸಾಯುವ ಪ್ರದೇಶದಲ್ಲಿ 'ಜೇಮೆ ನಾಗಾಸ್' ಎಂಬ ಬುಡಕಟ್ಟು ಜನ ವಾಸವಿರುತ್ತಿದ್ದರು. ಪಕ್ಷಿಗಳ ಸಾವಿನಿಂದ ಭಯಗೊಂಡಿದ್ದ ಅವರು 1905ರಲ್ಲಿ ಈ ಸ್ಥಳವನ್ನು ಬಿಟ್ಟು ವಲಸೆ ಹೋಗಿದ್ದಾರೆ.

ಪಕ್ಷಿಗಳ ಸಾವನ್ನೇ ಪ್ರವಾಸೋದ್ಯಮದ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವ ಜಿಲ್ಲಾಡಳಿತ 2010ರಿಂದ ಪ್ರತಿ ವರ್ಷ 'ಜಟಿಂಗ ಹಬ್ಬ'ವನ್ನು ಆಚರಿಸುತ್ತದೆ! ಎಲ್ಲೆಡೆಯಿಂದ ಸಾವಿರಾರು ಜನ ಬಂದು ಈ ಸಾಮೂಹಿಕ ಆತ್ಮಹತ್ಯೆಯನ್ನು